### ಗುಂಟೂರಿನ ಹೀಲಿಯಂಗೆ 150...

ಗುರುರಾಜ್ ದಾವಣಗೆರೆ ಅವರ ಲೇಖನದಲ್ಲಿ ಸಂಕ್ಷಿಪ್ತ ಮಾಹಿತಿ ಇದೆ. ಹಲವು ವಿಶೇಷಣಗಳನ್ನು ಹೊಂದಿರುವ ಈ ಅನಿಲದ ಮಾಹಿತಿ ಓದಿ ಕುತೂಹಲ ಮೂಡಿತು. ಬೆಲೂನ್‌ಗಳಲ್ಲಿ ತುಂಬಿ ಹಾರಿಬಿಡುವಾಗ ಏನೆಲ್ಲಾ ಅವಾಂತರಗಳು ಉಂಟಾಗುತ್ತವೆ ಹಾಗೂ ಅವುಗಳ ಬಗ್ಗೆ ಹೇಗೆ ಎಚ್ಚರವಹಿಸಬೇಕು ಎಂಬ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

– ಮಾಸ ಬೆಳಲಗೆರೆ, ಹೊಳೆಹೊನ್ನೂರು



ಹೀಲಿಯಂ ಅನ್ನು ಪಿಯರೆ ಜಾನ್ಸನ್ ನಮ್ಮ ಭಾರತದಲ್ಲಿ ಕಂಡುಹಿಡಿದ ಎಂದು ತಿಳಿದು ಸಂತೋಷವಾಯಿತು. ಲೇಖನ ಮುಂದಿನ ಪೀಳಿಗೆಗೆ ಉಪಯುಕ್ತ ಮಾಹಿತಿ ಒದಗಿಸುವಂತಿದೆ.

–ಎನ್.ಟಿ. ಅನಿಲ್,ಬೆಂಗಳೂರು

ಆವರ್ತ ಕೋಷ್ಟಕದಲ್ಲಿ ಮೊದಲ ಸ್ಥಾನದಲ್ಲಿರುವುದು ಜಲಜನಕ, ಹೀಲಿಯಂ ಅಲ್ಲ. ಹೀಲಿಯಂಗೆ ದ್ವಿತೀಯ ಸ್ಥಾನ. ಹೀಲಿಯಂನ ತೂಕ ಜಲಜನಕದ ತೂಕದ ದುಪ್ಪಟ್ಟು. ವಾತಾವರಣದ ವಾಯು, ಜಲಜನಕಕ್ಕಿಂತ ಹದಿನಾರು ಪಟ್ಟು ಭಾರವಿದ್ದರೆ ಹೀಲಿಯಂಗಿಂತ ಎಂಟು ಪಾಲಿನಷ್ಟಿದೆ. ಗುಂಟೂರು ಇರುವುದು ಆಂಧ್ರಪ್ರದೇಶದಲ್ಲಿ. ಕರ್ನಾಟಕದಲ್ಲಿ ಎಂದು ಲೇಖನದ ಮೇಲುಬರಹದಲ್ಲಿ ತಪ್ಪಾಗಿ ಮುದ್ರಿಸಲಾಗಿದೆ.

–ಶ್ರೀಶ, ಬೆಂಗಳೂರು.

ಹೌದು. ತಪ್ಪಾಗಿದೆ. ವಿಷಾದಿಸುತ್ತೇವೆ. —ಸಂ.




### ಪೌರಾಣಿಕ ಧಾರಾವಾಹಿಗಳು ಬರಲಿ

ನಾನು 'ಸುಧಾ' ಪತ್ರಿಕೆಯನ್ನು ಕಳೆದ 25 ವರ್ಷಗಳಿಂದ ಓದುತ್ತಿದ್ದೇನೆ. ಇತ್ತೀಚೆಗಿನ ಕೆಲವು ವರ್ಷಗಳಿಂದ ಪತ್ರಿಕೆಯ ಹೂರಣದ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ನನಗನಿಸಿದೆ. ಉತ್ತಮ ಧಾರಾವಾಹಿಗಳೂ ಬರುತ್ತಿಲ್ಲ. ಹತ್ತು ಸಂಚಿಕೆಗಳಿಗೆಲ್ಲ ಮುಗಿದುಹೋಗುತ್ತದೆ. ನನ್ನ ಬಾಲ್ಯದ ದಿನಗಳಲ್ಲಿ 'ಮಹಾಭಾರತ', 'ಎಡಕಲ್ಲು ಗುಡ್ಡದ ಮೇಲೆ'ಗಳಂಥ ಧಾರಾವಾಹಿಗಳು ಬರುತ್ತಿದ್ದವು. ಅವುಗಳನ್ನು ಓದಲಿಕ್ಕಾಗಿ ನಾವು ವಾರವಿಡೀ ಕಾಯುತ್ತಿದ್ದೆವು. ಈಗಲೂ ಪೌರಾಣಿಕ ಧಾರಾವಾಹಿಗಳು ಅಥವಾ ಜನಪ್ರಿಯ ಲೇಖಕರ ಧಾರಾವಾಹಿಗಳನ್ನು ಪ್ರಕಟಿಸಿದರೆ ಚೆನ್ನಾಗಿರುತ್ತದೆ. ಈ ಕುರಿತು ಆಲೋಚಿಸಿರಿ

– ನವೀನ್ ಕುಮಾರ್, ಬೆಂಗಳೂರು

### ಇದು ವಿ'ಭಿನ್ನ'

'ಗಾಂಧಿನಗರ ಪೋಸ್ಟ್'ನ ಇದು ವಿ'ಭಿನ್ನ' ಬರಹ ಸ್ವಾಗತಾರ್ಹ. ಇತ್ತೀಚೆಗೆ ಹೊಸದಾಗಿ ನಟಿಯರು ಸಿನಿಮಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಅವರಲ್ಲಿ ಈ ಚಿತ್ರದಲ್ಲಿ ಅಭಿನಯಿಸುತ್ತಿರುವ ಪಾಯಲ್ ರಾಧಾಕೃಷ್ಣ ಅವರಲ್ಲಿ ಒಬ್ಬರು. ಪ್ರತಿಭಾವಂತ ಕಲಾವಿದಯಾದ ಇವರು ಅಪ್ಪಟ ಕನ್ನಡತಿ. ಇವರು ಉನ್ನತ ಮಟ್ಟಕ್ಕೆ ಬರಲಿ.

–ಕಂಪ್ಲಾಪುರ ಮೋಹನ್, ಪಿರಿಯಾಪಟ್ಟಣ

### ಯೋಧವಿಧವೆಯರ ಮುಗಿಯದ ಯುದ್ಧ

ಯೋಧರ ಪತ್ನಿಯರು ವಿಧವೆಯಾಗಿ ಅನುಭವಿಸುತ್ತಿರುವ ಬದುಕಿನ ಸಂಕಟಗಳ ಕುರಿತ ಸೌಮ್ಯಾ ನಾಯರ್ ಅವರ ಲೇಖನ ಮನಮುಟ್ಟುವಂತೆ ಇತ್ತು. ಯೋಧನ ಪತ್ನಿಗೆ, ಮಕ್ಕಳಿಗೆ ನೆಮ್ಮದಿಯ ಬದುಕು ನಡೆಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

—ಫ್ಲೋರಾ ಅಚ್ಯುತ, ಸುಂದರ್, ಬೆಂಗಳೂರು, ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಕಾಡಿಗೆ ಬೆಂಕಿ ಧಗ ಧಗ

'ಕಾಡಿಗೆ ಬೆಂಕಿ ನಾಡಿಗೆ ಬರೆ' 'ಧಗ ಧಗ ಧಗ' ಮುಖಪುಟ ಲೇಖನ (ಕೆ.ಎಚ್. ಓಬಳೇಶ್) ವಿಷಯದ ಅದರಾಳಕ್ಕಿಳಿದು ಹಲವು ಒಳನೋಟಗಳನ್ನು ನೀಡಿದೆ.

ಬಂಡೀಪುರದ ಕೆಲವು ಹಾಡಿಗಳಲ್ಲಿ ಮಕ್ಕಳಾಗದಿದ್ದರೆ ಅಡವಿಗೆ ಬೆಂಕಿ ಹಚ್ಚುವ ಹರಕೆ ಹೊರುವ ಸಂಪ್ರದಾಯವಿದೆ. ಅರಣ್ಯದ ಸಮೀಪವಿರುವ ಗ್ರಾಮಗಳಿಗೆ ಹುಲಿಯಂಥ ಹಿಂಸಾಪ್ರಾಣಿಗಳು ಬರಬಾರದೆಂದು ಅಡವಿಗೆ ಬೆಂಕಿ ಇಡುವ ಜನರೂ ಇದ್ದಾರೆ. ಇಂಥ ಮೂಢರಿಗೆ ಬುದ್ಧಿ ಬರುವುದು ಯಾವಾಗ? 'ಕಾಡಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ಜವಾಬ್ದಾರಿ ನಮ್ಮಲ್ಲಿ ಬೆಳೆಯಬೇಕು.

– ಶೋಭಾ ಎಂ. ಕಲಬುರ್ಗಿ, ಎಚ್. ಆನಂದ ಕುಮಾರ್, ಚಿತ್ರದುರ್ಗ

'ಕಾಡಿನ ಬೆಂಕಿ'; ನಾಡಿನ (ಊರಿನ) ಬೆಂಕಿಯ ಮುಂದೆ ಕಾಡಿನ ಬೆಂಕಿ ಯಾವ ಲೆಕ್ಕ? ಮನದ ಬೆಂಕಿಯ ಮುಂದೆ ವನದ ಬೆಂಕಿ ಯಾವ ಲೆಕ್ಕ? (ಒಳಗಿನ ಕಿಚ್ಚಿಗೆ ಕಿಚ್ಚು ಹಚ್ಚಬೇಕು!).

–ಸಿ.ಪಿ.ಕೆ. ಮೈಸೂರು

ಕಾಡಿನ ಬೆಂಕಿ ಬಗೆಗೆ ಹಲವು ಕೋನದಿಂದ ಸಮರ್ಥವಾಗಿ ವಿಶ್ಲೇಷಣೆ ಮಾಡಲಾಗಿದೆ. ಅಧಿಕಾರಿಗಳು ಮತ್ತು ಕಾಡಂಚಿನ ಜನರ ಸಂಘರ್ಷವೂ ಈ ಬೆಂಕಿಗೆ ಕಾರಣವಾಗುತ್ತಿರುವುದು ಆತಂಕ ತರುತ್ತಿದೆ. ಸಮಕಾಲೀನ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ 'ಸುಧಾ'ದ ನಿಲುವು ಪತ್ರಿಕೆಯನ್ನು ಓದುಗರಿಗೆ ಮತ್ತಷ್ಟು ಹತ್ತಿರವಾಗಿಸುತ್ತದೆ.

–ಎಸ್. ಲಕ್ಷ್ಮೀ ನರಸಿಂಹ, ಚಾಮರಾಜನಗರ

### ಬೆಂಗಳೂರಿನ ಎನ್‌ಬಿಎ ಆಟಗಾರರು...

ರವಿಚಂದರ್ ತಮ್ಮ ಲೇಖನದಲ್ಲಿ ಕಣ್ಣಿಗೆ ಕಟ್ಟುವಂತೆ ರಸವತ್ತಾಗಿ ವರ್ಣಿಸಿ ಅಮೆರಿಕದ ಬಾಸ್ಕೆಟ್‌ಬಾಲ್ ಆಟಗಾರರಿಗೂ ಬೆಂಗಳೂರಿನ ಪೇಪರ್ ಹುಡುಗರಿಗೂ ಮೈಸೂರಿನ ಸುಬ್ಬರಾಮಯ್ಯನವರಿಗೆ ಹಾಗೂ ಮೈಸೂರು ಮಲ್ಲಿಗೆಯ ಬಳೆಗಾರ ಚೆನ್ನಯ್ಯನಿಗೂ ನಂಟು ಕಲ್ಪಿಸಿರುವುದು ಅದ್ಭುತವಾಗಿದೆ. ಅವರ ಬರವಣಿಗೆಯ ಶೈಲಿ, ವ್ಯಾಪಕವಾದ ವಿಷಯ ಸಂಗ್ರಹಣೆ ರೋಚಕ.

—ಅನಿಲ್, ಮುಕುಂದ ಹೆರಕಲ್ಲ, ಕಲಬುರ್ಗಿ, ಜಯಲಕ್ಷ್ಮಿ, ಮೈಸೂರು

### ಮಬ್ಬಲಿ ಗೋಸಾಲ

ಅಮೃತಮತಿ ಬರೆದಿರುವ 'ವಿಚಾರ ಲಹರಿ' ಲೇಖನ ಅಧ್ಯಯನಪೂರ್ಣವಾಗಿದೆ. ಅಪರೂಪದ ಅಜೀವಿಕರ ವಿಷಯವನ್ನು ಕುರಿತು ಬರೆದಿರುವುದು ಅಭಿನಂದನಾರ್ಹ. ಈ ಬರಹದಲ್ಲಿ ಉದ್ದಕ್ಕೂ 'ಮಬ್ಬಲಿ ಗೋಸಾಲ' ಎಂದು ಬಳಸಲಾಗಿದೆ. ಇದು ಸರಿಯಾದ ನಾಮರೂಪವಲ್ಲ. ಅಜೀವಿಕರನ್ನು ಕುರಿತು ಅಧಿಕೃತ ಮಾಹಿತಿಗಳು ಪ್ರಾಕೃತ ಮತ್ತು ಪಾಳಿ ಭಾಷೆಗಳಲ್ಲಿರುವ ಪ್ರಾಚೀನ ಆಗಮಗ್ರಂಥಗಳಲ್ಲಿ ಸಿಗುತ್ತವೆ. ಅಲ್ಲೆಲ್ಲಾ 'ಮಕ್ಖಲಿ ಗೋಸಾಲ' ಎಂಬ ರೂಪ ವ್ಯಾಪಕವಾಗಿ ಪ್ರಯೋಗವಾಗಿದ್ದು ಜೊತೆಗೆ ಅಲ್ಲಲ್ಲಿ ಮಂಕಲಿ ಗೋಸಾಲ, ಮಸ್ಕರಿ ಗೋಸಾಲ ಎಂಬ ರೂಪಗಳೂ ಬಳಕೆಯಾಗಿವೆ. ಅದರಿಂದ ಈ ಬರಹದಲ್ಲಿರುವ ಮಬ್ಬಲಿ ಗೋಸಾಲ ಎಂಬುದನ್ನು 'ಮಕ್ಖಲಿ ಗೋಸಾಲ' ಎಂದು ತಿದ್ದಿಕೊಳ್ಳುವುದು ಅಗತ್ಯ.

—ಕಮಲಾ ಹಂಪನಾ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in